ತೀರ್ಥಗಣಪತಿಯನ್ನು ಯಾರೇ ಆಗಲಿ ತೀರ್ಥ ಪುರಾಣಿಕರ ಪೌರೋಹಿತ್ಯದಲ್ಲಿ ಆರಾಧಿಸಿದರು ಎಂದಾದರೆ ಲಾಗಾಯ್ತಿನಿಂದ ಸಾಧ್ಯವಾಗದೇ ಉಳಿದ ಕೆಲಸ ಕಾರ್ಯಗಳು ಕೈಗೂಡಿದವು ಎಂಬುದೇ ಎಲ್ಲಾ ಜನರ ನಂಬಿಗೆಯಾಗಿತ್ತು. ಅದೆಂತೋ ಏನೊ? ಜನರ ನಂಬಿಗೆ ಹುಸಿಗೊಳ್ಳುತ್ತಿರಲಿಲ್ಲ. ಭಕ್ತರ ಪರವಾಗಿ ಕೇಳಿಕೊಳ್ಳುವ ತೀರ್ಥ ಪುರಾಣಿಕರ ಮಾತು ಮತ್ತು ಪ್ರಾರ್ಥನೆಗಳು ನೆರವೇರುತ್ತಿದ್ದವು. ತೀರ್ಥಗಣಪತಿ ಪುರಾಣಿಕರಿಗೆ ಸ್ಪಂದಿಸುತ್ತಿದ್ದ ಎಂಬುದು ಜನರ ವಿಶ್ವಾಸ.

ಗಿಣಿಪುರದಲ್ಲಿ ಶಂಖಪುಷ್ಕರಿಣಿ ಎಂಬ ಒಂದು ಸ್ವಚ್ಛ ಸಿಹಿ ನೀರಿನ ಕೊಳವಿತ್ತು. ಅಲ್ಲಿನ ಉತ್ತರ ಪೂರ್ವದ ಮೂಲೆಯಲ್ಲಿ ಅಂದರೆ ಈಶಾನ್ಯಕ್ಕೆ ತೀರ್ಥಗಣಪತಿಯ ಪುಟ್ಟ ಗುಡಿಯೊಂದು ಇತ್ತು. ಅಂತೂ ಅಲ್ಲಿ ನಡೆಯುವ ಕಾರ್ಯಕ್ರಮಗಳನ್ನೆಲ್ಲ ನೆರವೇರಿಸುವ ಕೈಂಕರ್ಯ ಪುರಾಣಿಕರದ್ದಾಗಿತ್ತು. ಆದರೆ, ಅನಿರೀಕ್ಷಿತವಾಗಿ ಇನ್ನೂ ಹತ್ತು ವರ್ಷ ಚೆನ್ನಾಗಿ ಬದುಕಬಹುದಿದ್ದ ಪುರಾಣಿಕರು ಕುಸಿದಿದ್ದರು. ಮನುಷ್ಯನ ಜೀವನದಲ್ಲಿ ಅಗಲಿಕೆ ತುಂಬಾ ನೋವಿನದು. ಬ್ರೆಡ್ ತಿಂದಿದ್ದೇ ನೆವವಾಗಿ ಶುರುಗೊಂಡ ಬಾಧೆ ಸಾಕಾಯ್ತು ಕಾಲಕ್ಕೆ ವಾಮನನ ತಾಯಿ ಪದ್ಮಾಕ್ಷಿಯನ್ನು ಮುಗಿಸಲು. ಅಮ್ಮ ಅಸ್ವಸ್ಥಳಾಗಿದ್ದಾಳೆ ಎಂಬ ಸುದ್ದಿ ತಿಳಿದು ಬೆಂಗಳೂರಿನಿಂದ ಬಂದು ಹತ್ತಿರದ ಜಿಲ್ಲಾ ಆಸ್ಪತ್ರೆಗೆ ವಾಮನ ತಾಯಿಯನ್ನು ಸಾಗಿಸಿದನಾದರೂ ಉಪಯೋಗ ಆಗಲಿಲ್ಲ. ಮತ್ತೆ ಅಣ್ಣ ಜಗದೀಶ ಬಂದಿದ್ದ ಜಪಾನಿನಿಂದ. ಒಂದೇ ವರ್ಷದ ಅಂತ್ಯದಲ್ಲಿ ಅಪ್ಪ ಅಮ್ಮ ಹೀಗೆ ಇಬ್ಬರನ್ನು ವಾಮನ ಕಳಕೊಂಡಿದ್ದ.

